# ತಾಳಿ, ಬಾಳಿದ ನಟ

ಮಾವ ರಾಜ್ಯದ ಸಾಂಸ್ಕೃತಿಕ ಐಕಾನ್. ಅಪ್ಪ ಸಿನಿಮಾ ನಿರ್ಮಾಪಕ, ವಿತರಕ. ಅಣ್ಣ ಚಿಲ್ಟೇರಿ ಹಂತದಲ್ಲೇ ಚಿನ್ನಾರಿ ಆಗಿ ಮೆರೆದಿದ್ದವರು. ಸಹಜವಾಗಿಯೇ ತಾನೂ ನಟನಾಗಬೇಕು ಎಂದು ಬಯಸಿ, ಅಭಿನಯಕ್ಕೆ ಧುಮುಕಿದ್ದಾಯಿತು. ಮೊದ ಮೊದಲು ಬುವಿಗಿಳಿದ ಮಳೆಹನಿಯನ್ನು ಕಣ್ಣಲ್ಲಿ ತುಂಬಿಕೊಂಡ ನಟಿಯ ಜೊತೆಗೆ ಅಭಿನಯಿಸಿದ ಈ ನಟ, ತಣ್ಣಗೇ ಇದ್ದುಕೊಂಡು ವೃತ್ತಿಬದುಕು ಕಟ್ಟಿಕೊಂಡ ಬಗೆ ಭಿನ್ನ.

ಮೊದಲ ಮೆಟ್ಟಿಲಿನಲ್ಲೇ ಮೂಗನ ಪಾತ್ರ ಮಾಡಿದಾಗ ತುಸು ಪೀಚು ಪೀಚು ಎನ್ನುವಂತಿತ್ತು ದೇಹ. ಎರಡನೇ ಸಿನಿಮಾದ ಕಥಾವಸ್ತುವಿನಲ್ಲಿ ಕರ್ನಾಟಕ, ಮಹಾರಾಷ್ಟ್ರದ ಭಾಷಾ ಸಂಘರ್ಷ ಇದ್ದುದು ವಿಶೇಷ. ಅದರಲ್ಲಿನ ನಾಯಕಿ ಈಗ ರಾಜಕೀಯ ಮೊಗಸಾಲೆಯಲ್ಲಿ ಓಡಾಡಿಕೊಂಡಿದ್ದು, ಟ್ವಿಟ್ಟರ್‌ನಲ್ಲಿ ಆಗೀಗ ಬೆಂಕಿಯುಗುಳುತ್ತಿರುತ್ತಾರೆ.

ಆ ಭಿನ್ನ ನೆಲೆಗಟ್ಟಿನ ಕಥನದ ಸಿನಿಮಾದಲ್ಲಿನ ಶ್ರೇಷ್ಠ ಅಭಿನಯಕ್ಕೆ ರಾಜ್ಯ ಪ್ರಶಸ್ತಿ ದಕ್ಕಿತು. ಆದರೂ ಆಮೇಲೆ ಸತತವಾಗಿ ಸೋಲುಂಡ ಸಿನಿಮಾಗಳಿಂದಾಗಿ ಆರಕ್ಕೇರಲು ಆಗಲಿಲ್ಲ. ಇನ್ನೊಂದು ಕಡೆ ಅವರಣ್ಣ ಕೂಡ ವೃತ್ತಿಬದುಕು ರೂಪಿಸಿಕೊಳ್ಳಲು ಹೆಣಗಾಡುತ್ತಿದ್ದರು. ಪ್ರತಿಭೆ ಇದ್ದೂ ಬೆಳ್ಳಿಮಿಂಚಿಗಾಗಿ ಕಾಯುವ ಪರಿಸ್ಥಿತಿ. ಕುಟುಂಬದಲ್ಲಿ ಘಟಾನುಘಟಿಗಳಿದ್ದೂ ಭವಿತವ್ಯದ ಕುರಿತು ಮಾಯವಾಗದ ಚಿಂತೆ.

ಸಿನಿಮಾಗಳ ವಸ್ತುಗಳನ್ನು ನಿರೂಪಣೆಯ ಶೈಲಿಯಿಂದಲೇ ಮೇಲಕ್ಕೆತ್ತಬಹುದಾದ ಸಾಧ್ಯತೆಯೊಂದನ್ನು ಶೋಧಿಸಿಕೊಂಡರು. ಮೊದಲಿನಿಂದಲೂ ನಿರ್ದೇಶಕರ ನಟನೇ ಆಗಿದ್ದ ಅವರು ಹಲವು ಪ್ರಯೋಗಗಳನ್ನು ಮಾಡಿದರು. ಅಣ್ಣನ ಜೊತೆಗೂ ಅಭಿನಯಿಸಿದರು. ಬಹುತಾರಾಗಣದ ಸಿನಿಮಾಗಳಲ್ಲಿ ಎದ್ದುಕಾಣಲು ಪ್ರಯತ್ನಿಸಿದರು. ನಗುವಿನ ಟೈಮಿಂಗ್ ನಿಕಷಕ್ಕೆ ಒಡ್ಡಿಕೊಂಡರು. ಅಳುವುದಂತೂ ಮೊದಲಿನಿಂದಲೂ ಅಭ್ಯಾಸ.

ಈಗ ನೋಡಿದರೆ ಅತಿಥಿ ಪಾತ್ರಗಳನ್ನೂ ಸೇರಿಸಿದರೆ ನಟಿಸಿರುವ ಸಿನಿಮಾಗಳ ಸಂಖ್ಯೆ ಇಪ್ಪತ್ತು ಮತ್ತೊಂದು. ಮೊದಲ ಸಿನಿಮಾ ತೆರೆಕಂಡು ಹದಿನೈದು ವರ್ಷಗಳಾದವು. ಮೂವತ್ತೇಳರ ಪ್ರಾಯದಲ್ಲೂ ಕನಸುಗಳೇನೂ ಕಮರಿಲ್ಲ. ವರ್ಷಕ್ಕೆ ಒಂದೇ ಸಿನಿಮಾ. ಅದು ಹೇಗಾದರೂ ಹಿಟ್ ಆಗಲೇಬೇಕು ಎಂಬ ಸೂತ್ರವನ್ನು ಅವರು ನಾಲ್ಕೈದು ವರ್ಷಗಳಿಂದ ಉಜ್ಜಲಾರಂಭಿಸಿದ್ದಾರೆ. ಅವರು ಹೀಗೆ ಚಿತ್ರಕಥೆಗಳ ಜಪ್ತಿಗೆ ಇಳಿದ ಮೇಲೆ ಶಿವರಾಜ್‌ಕುಮಾರ್ ತರಹದ ದಿಗ್ಗಜ ನಟರೂ ಸಾಥ್ ಕೊಟ್ಟಿರುವುದು ವಿಶೇಷ. ನೆಂಟರ ಹುಡುಗನಿಗೆ ಅಷ್ಟೂ ಮಾಡುವುದಿಲ್ಲವೇ ಎಂಬ ಪ್ರಶ್ನೆ ಕೇಳಬಹುದು. ಆದರೆ, ಶಿವಣ್ಣ ಕೂಡ ಪ್ರಯೋಗಮುಖಿ ಆಗಿರುವುದರಿಂದ ಇದು ಸಾಧ್ಯವಾದದ್ದು.

ಕೃಷ್ಣನ ವಾದ್ಯದ ಹೆಸರಿನ ಹುಡುಗ. 'ಶ್ರೀ' ಎಂಬುದನ್ನು ನಾಮದ ಮೊದಲು ಸೇರಿಸಿಕೊಂಡಾಗಿನಿಂದ ಅದೃಷ್ಟ ಖುಲಾಯಿಸಿದೆ ಎನ್ನುವವರ ನಂಬಿಕೆಯಲ್ಲೂ ತಥ್ಯವಿದೆ.

● **ವಿಶಾಖ ಎನ್.**

Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000,
Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68